ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕರ್ನಾಟಕ ಸರ್ಕಾರ

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಈ-ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

---

ಸಂಖ್ಯೆ:ಪ್ರ.ವಿ./ 4 /2018-19

ದಿನಾಂಕ: 25-08-2018

## ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ ಉಂಟಾಗಿರುವ ತುರ್ತು ಪರಿಸ್ಥಿತಿ ಹಿನ್ನಲೆಯಲ್ಲಿ ನಿಯೋಜಿಸಲಾಗಿರುವ ನೆರೆಯ ಜಿಲ್ಲೆಯ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಯವರು, ಹಾಸನ ಜಿಲ್ಲೆ, ಹಾಸನ ರವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಬ್ಬಂದಿ(1)/ಸಿ.ಆರ್/114/2018-19, ದಿನಾಂಕ 17.08.2018

2) ಶ್ರೀ ಗುರುಮೂರ್ತಿ ಎಸ್.ಆರ್., ಗ್ರಾಮ ಲೆಕ್ಕಿಗರು, ದೊಡ್ಡಕುಂಡ ವೃತ್ತ, ಹೊಳೆನರಸೀಪುರ ತಾಲ್ಲೂಕು ಇವರ ಮನವಿ ದಿನಾಂಕ 25.08.2018

---

ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿ ಮಳೆಯಿಂದ ಮಡಿಕೇರಿ ನಗರದ ಸುತ್ತಮುತ್ತ ಹಾಗೂ ಜಿಲ್ಲೆಯ ಹಲವೆಡೆ ಜಲಾವೃತ ಮತ್ತು ಭೂಕುಸಿತದಿಂದ ಮಾನವ/ ಜಾನುವಾರು ಜೀವಹಾನಿ, ಮನೆಹಾನಿ, ರಸ್ತೆಹಾನಿ ಸೇರಿದಂತೆ ಹಲವು ನಷ್ಟಗಳು ಆಗಿರುತ್ತದೆ. ಈ ಸಂಬಂಧ ಪರಿಹಾರ ಕಾರ್ಯದಲ್ಲಿ ಕೊಡಗು ಜಿಲ್ಲಾಡಳಿತಕ್ಕೆ ಸಹಕರಿಸಲು ಉಲ್ಲೇಖ(1)ರ ಅಧಿಕೃತ ಜ್ಞಾಪನದಂತೆ ಜಿಲ್ಲಾಧಿಕಾರಿಯವರು, ಹಾಸನ ಜಿಲ್ಲೆ, ಹಾಸನ ರವರು ಕಂದಾಯ ಇಲಾಖೆಯ 20 ಅಧಿಕಾರಿ / ಸಿಬ್ಬಂದಿಗಳನ್ನು ನಿಯೋಜಿಸಿರುತ್ತಾರೆ. ನಿಯೋಜಿತ ಅಧಿಕಾರಿ/ಸಿಬ್ಬಂದಿಗಳು ದಿನಾಂಕ 18.08.2018ರ ಪೂರ್ವಾಹ್ನದಿಂದ ಈವರೆವಿಗೂ ಸಮರೋಪಾದಿಯಲ್ಲಿ ಹಾಗೂ ಪ್ರಶಂಸನೀಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಪ್ರಸ್ತುತ, ಉಲ್ಲೇಖ(2)ರ ಶ್ರೀ ಗುರುಮೂರ್ತಿ ಎಸ್.ಆರ್., ಗ್ರಾಮ ಲೆಕ್ಕಿಗರು, ದೊಡ್ಡಕುಂಡ ವೃತ್ತ, ಹೊಳೆನರಸೀಪುರ ತಾಲ್ಲೂಕು ಇವರು ಮನವಿ ಸಲ್ಲಿಸುತ್ತಾ, ಸದರಿಯವರ ಪತ್ನಿಯ ಆರೋಗ್ಯದ ಹಿತದೃಷ್ಠಿಯಿಂದ ನಿಯೋಜಿತ ಕರ್ತವ್ಯದಿಂದ ಬಿಡುಗಡೆಗೊಳಿಸಲು ಕೋರಿರುತ್ತಾರೆ.

ಆದುದರಿಂದ, ಉಲ್ಲೇಖ(2)ರ ಪತ್ರದಲ್ಲಿನ ಕೋರಿಕೆಯಂತೆ ಶ್ರೀ ಗುರುಮೂರ್ತಿ ಎಸ್.ಆರ್., ಗ್ರಾಮ ಲೆಕ್ಕಿಗರು, ದೊಡ್ಡಕುಂಡ ವೃತ್ತ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರನ್ನು ದಿನಾಂಕ 25.08.2018ರ ಅಪರಾಹ್ನದಂದು ಕರ್ತವ್ಯದಿಂದ ಬಿಡುಗಡೆಗೊಳಿಸಿದೆ.

(ಕ.ಟಿ.ಜಿ.ಅ.ಮೇ.)

ಅಪರ ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಪ್ರತಿಯನ್ನು:

1) ಜಿಲ್ಲಾಧಿಕಾರಿಯವರು, ಹಾಸನ ಜಿಲ್ಲೆ, ಹಾಸನ ರವರಿಗೆ ಮಾಹಿತಿಗಾಗಿ.
2) ಶ್ರೀ ಗುರುಮೂರ್ತಿ ಎಸ್.ಆರ್., ಗ್ರಾಮ ಲೆಕ್ಕಿಗರು, ದೊಡ್ಡಕುಂದ ವೃತ್ತ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರಿಗೆ ಸೂಕ್ತ ಕ್ರಮಕ್ಕಾಗಿ.